ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,

ಕುಂದಾಪುರ

ಸಿ.ಸಿ. ನಂಬ್ರ: 390/2018

ಚಾಸಾ: 15 ಪ್ರಾಸಾ:6

ದಿನಾಂಕ: 09.10.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಪರಮೇಶ್ವರ |
| ತಂದೆಯ ಹೆಸರು | : | ರಾಮ ಗುಣಗ |
| ವಯಸ್ಸು | : | 63 ವರ್ಷ |
| ಉದ್ಯೋಗ | : | ನಿವೃತ್ತ ಪೊಲೀಸ್ ಇನ್ಸಪೆಕ್ಟರ್ |
| ವಾಸ ಸ್ಥಳ | : | ಕುಮಟಾ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ: (ವಿ.ಸಿ ಮೂಲಕ)**

ನಾನು 21-10-2017 ರಿಂದ 25-09-2019ರವರೆಗೆ ಬೈಂದೂರು ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 12-12-2017 ರಂದು ಈ ಪ್ರಕರಣದ ಕಡತವನ್ನು ಚಾಸಾ-14ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತೇನೆ.

ತನಿಖೆಯನ್ನು ಮುಂದುವರೆಸಿ ಈ ಪ್ರಕರಣದಲ್ಲಿ ಅಪಘಾತಕ್ಕೆ ಸಂಬಂಧಿಸಿದ ಲಾರಿ ಸಂಖ್ಯೆ ಕೆಎ-05-ಎಎಂ-9795ರ ಆರ್ ಸಿ ಮಾಲೀಕರಾದ ಚಾಸಾ-9ರವರು ಕಚೇರಿಗೆ ಹಾಜರಾಗಿ ಕಲಂ 133ರಡಿಯಲ್ಲಿ ನೊಟೀಸು ನೀಡಿ ಉತ್ತರವನ್ನು ಪಡೆದಿರುತ್ತೇನೆ. ಅಪಘಾತದ ಸಮಯದಲ್ಲಿ ಲಾರಿಯನ್ನು ಆರೋಪಿ ಚಲಾಯಿಸುತ್ತಿದ್ದ ಬಗ್ಗೆ ಹೇಳಿಕೆ ನೀಡಿರುತ್ತಾರೆ.

ವಾಹನದ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಪರಿಶೀಲಿಸಿ ಅದರ ಪ್ರತಿಗಳನ್ನು ಕಡತಕ್ಕೆ ಅಳವಡಿಸಿರುತ್ತೇನೆ. ಅಪಘಾತಪಡಿಸಿದ ಲಾರಿಯನ್ನು ಬಿಡುಗಡೆ ಮಾಡಲು ನ್ಯಾಯಾಲಯದಿಂದ ಆದೇಶ ಬಂದಿದ್ದು, ಆರ್ ಸಿ ಮಾಲೀಕರಿಗೆ ಇಂಡಿಮಿನಿಟಿ ಬಾಂಡ್ ಮೂಲಕ ವಾಹನವನ್ನು ಬಿಡುಗಡೆ ಮಾಡಿ ಸ್ವೀಕೃತಿ ಪಡೆದಿರುತ್ತೇನೆ.

ಆರೋಪಿ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡ ಬಗ್ಗೆ ಮಾಹಿತಿ ಬಂದಿರುತ್ತದೆ.

ದಿಃ 30-12-2017 ರಂದು ಈ ಪ್ರಕರಣದಲ್ಲಿ ಮೃತ ಆನಂದ ಹೆಬ್ಬಾರ್ ರವರ ಶವಪರೀಕ್ಷಾ ವರದಿಯನ್ನು ಕೆಎಂಸಿ ಆಸ್ಪತ್ರೆಯಿಂದ ಪಡೆದು ಕಡತಕ್ಕೆ ಅಳವಡಿಸಿರುತ್ತೇನೆ.

ಅಪಘಾತಕ್ಕೆ ಒಳಗೊಂಡ ವಾಹನಗಳ ಐಎಂವಿ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿರುತ್ತೇನೆ.

ಈವರೆಗಿನ ತನಿಖೆಯಿಂದ ಆರೋಪಿಯ ವಿರುದ್ದ ಸಾಕ್ಷ್ಯಧಾರಗಳು ಲಭ್ಯವಾಗಿದ್ದರಿಂದ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನ್ನೆ.

ಸಾಕ್ಷಿ ಕಲಂ 133ರ ತಿಳುವಳಿಕೆ, ಉತ್ತರ ಮತ್ತು ಸ್ವೀಕೃತಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ- 13 ರಿಂದ 15 ಎಂದು, ಸಾಕ್ಷಿ ಸಹಿಗಳನ್ನು ನಿಪಿ-13(ಎ) ರಿಂದ 15(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-8 ಮತ್ತು 9ನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ-11 ಮತ್ತು 12 ರಲ್ಲಿ ವಾಹನಗಳನ್ನು ನೋಡಿ ಗುರುತಿಸಿರುತ್ತಾರೆ.

<u>**ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಆರ್ ಕೆ ಎಂ ರವರಿಂದಃ**</u>

ಮೃತ ಆನಂದ ಹೆಬ್ಬಾರ್ ರವರಿಗೆ ಸುಮಾರು 65 ವರ್ಷ. ಚಾಸಾ-1ರವರು ಮೃತ ವ್ಯಕ್ತಿಗೆ ಚಿಕ್ಕಪ್ಪ ಆಗಬೇಕು. ಅವರು ಅಪಘಾತವಾದ 1 ಗಂಟೆಯ ನಂತರ ಸ್ಥಳಕ್ಕೆ ಬಂದಿರುತ್ತಾರೆ ಎಂದರೆ ಸರಿ. ಆತ ಯಾರ ವಿರುದ್ದವೂ ಪಿರ್ಯಾದನ್ನು ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-1 ರವರ ಪಿರ್ಯಾದನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಸ್ಥಳ ಮಹಜರು ಮತ್ತು ನಕಾಶೆಯನ್ನು ತಯಾರು ಮಾಡುವಾಗ ಸಾಕ್ಷಿದಾರರು ಇರಲಿಲ್ಲ ಎಂದರೆ ಸರಿಯಲ್ಲ. ಅಂತಿಮ ವರದಿಯನ್ನು ಸಲ್ಲಿಸುವ ಮೊದಲು ಕಡತವನ್ನು ಪರಿಶೀಲಿಸಿರುತ್ತೇನೆ. ಸಾಕ್ಷಿದಾರರ ಪಾತ್ರ ಏನು ಎಂದು ನೋಡಿ ತಿಳಿದುಕೊಂಡಿರುತ್ತೇನೆ.

ನಕಾಶೆ, ಸ್ಥಳ ಪಂಚನಾಮೆ ಜರುಗಿಸುವ ವೇಳೆಗೆ ಪ್ರತ್ಯಕ್ಷದರ್ಶಿಗಳಾಗಿ ಚಾಸಾ-4 ಮತ್ತು 5 ರವರು ಇದ್ದರು. ಅವರಿಬ್ಬರೂ ಘಟನೆಯ ಪ್ರತ್ಯಕ್ಷದರ್ಶಿಗಳಲ್ಲ ಎಂದರೆ ಸರಿ. ಆದ್ದರಿಂದ ನಕಾಶೆ ಮತ್ತು ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ಪ್ರತ್ಯಕ್ಷದರ್ಶಿಗಳ ಸಹಾಯ ಪಡೆಯದೆ ತಕ್ಷೀರು ಸ್ಥಳವನ್ನು ಗುರುತಿಸಲಾಗುವುದಿಲ್ಲ ಎಂದರೆ ಸಾಕ್ಷಿ ಚಾಸಾ-14 ರವರ ಪಂಚನಾಮೆ ಜರುಗಿಸಿರುವುದಾಗಿ ನುಡಿಯುತ್ತಾರೆ.

ನಾನು ಯಾವುದೇ ಸಾಕ್ಷಿದಾರರನ್ನು ವಿಚಾರಣೆ ಮಾಡಿಲ್ಲ. ಅಧೀನ ಅಧಿಕಾರಿಗಳು ಸರಿಯಾಗಿ ತನಿಖೆ ಮಾಡದೆ ಕಡತವನ್ನು ಸೃಷ್ಟಿ ಮಾಡಿದ್ದರೂ ಸಹ ನಾನು ಅವುಗಳನ್ನು ಸ್ವೀಕರಿಸಿ ತಪ್ಪು ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**